**ಅಮಲ್ಜಾರಿ ಸಂಖ್ಯೆ 4/2020** **ಓ.ಡಬ್ಲೂಃ 1**

ಸಾಕ್ಷಿಯನ್ನು ದಿಃ **22.08.2023** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ ಜೆ.ಡಿ.ಆರ್ ಪರ ಶ್ರೀ ಪಿ.ಎಲ್.ಕೆ. ವಕೀಲ**ರಿಂದ**

ಈ ಜಾರಿ ಅರ್ಜಿಯನ್ನು ಡಿ.ಹೆಚ್.ಆರ್ ರವರು ಸರ್ವೆ ನಂ. 4/5 ಕ್ಕೆ ಸಂಬಂಧಪಟ್ಟಂತೆ ಹಾಕಿದ್ದಾರೆ, ಆದರೆ ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ. ಈ ಜಾರಿ ಅರ್ಜಿ ನ್ಯಾಯಾಲಯದಲ್ಲಿ ಹೂಡಿರುವ ವಿಚಾರವನ್ನು ನನಗೆ ಭೂಮಿ ಕೊಟ್ಟಿರುವ ರಾಮೇಗೌಡ ರವರು ಈಗ್ಗೆ 1 ವರ್ಷದ ಹಿಂದೆ ಹೇಳಿದ್ದರು. ನಿಮಗೆ ಕೊಟ್ಟಿರುವ ಭೂಮಿಗೆ ಚೆಕ್ಕುಬಂದಿ ಬದಲಾಯಿಸಿಕೊಂಡು ಕೇಸ್ ಹಾಕಿದ್ದಾರೆ ನೀವು ವಕೀಲರ ಮೂಲಕ ನ್ಯಾಯಾಲಯಕ್ಕೆ ಹೋಗಿ ನಿಮಗೆ ಕೊಟ್ಟಿರುವ ಭೂಮಿಯೆ ಬೇರೆ ಜಾರಿ ಅರ್ಜಿಯ ಭೂಮಿಯೆ ಬೇರೆ ಎಂದು ನನಗೆ ಹೇಳಿದರು. ನಾವು ಕೊಂಡಿರುವ ಜಮೀನಿನ ಬಗ್ಗೆ ದಾಖಲಾತಿಗಳನ್ನು ನೋಡಿ, ವಿಚಾರಿಸಿ ಮಾತುಕತೆ ಆಡಿ ಖರೀದಿ ಮಾಡಿದ್ದೇವು. ಸರ್ವೆ ನಂ. 4/5 ಒಟ್ಟು 2 ಎಕರೆ, 38 ಗುಂಟೆ ಇದೆ. ಅದರ ಪೈಕಿ ರಾಮೇಗೌಡರಿಗೆ 10 ಗುಂಟೆ ಜಮೀನು ಇದ್ದು, ಅದನ್ನು ನಾನು ಖರಿದಿ ಮಾಡಿದ್ದೇನೆ. ಸದರಿ ಜಮೀನನ್ನು ಮಾಡುವ ಮೊದಲು ನಾನು ಅದರ ಆರ್.ಟಿ.ಸಿ ನೋಡಿದ್ದೆ. ಸದರಿ ಸರ್ವೆ ನಂ. 4/5 ರ ಒಟ್ಟು 2 ಎಕರೆ 38 ಗುಂಟೆ ಪೈಕಿ ನಂಜೇಗೌಡರಿಗೆ 1 ಎಕರೆ 10 ಗುಂಟೆ, ನಿಂಗಮ್ಮ ರವರಿಗೆ 1 ಎಕರೆ 10 ಗುಂಟೆ ಮತ್ತು ವರಲಕ್ಷ್ಮಮ್ಮ ನವರಿಗೆ 7 ಗುಂಟೆ ಇದೆ. ಸದರಿ ನಿಂಗಮ್ಮ ರವರು ರಾಮೇಗೌಡರ ಅಣ್ಣನ ಹೆಂಡತಿ ಎಂದರೆ ಇರಬಹುದು.

ಈ ಡಿಕ್ರಿ ಹೊಲ್ಡರ್ ಸೋಮೆಗೌಡರವರು ಸದರಿ ನಿಂಗಮ್ಮನವರಿಂದ ಈ ಅರ್ಜಿ ಸ್ವತ್ತನ್ನು ಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಜಮೀನಿನ ಕರಾರು ಪತ್ರ ಆದ ನಂತರ ಸ್ಕೆಚ್

ಮಾಡಿಸಿರುವುದಿಲ್ಲ. ನ್ಯಾಯಾಲಯದ ಆದೇಶದ ಮೇರೆಗೆ ಕ್ರಯ ಪತ್ರ ಮಾಡಿಕೊಳ್ಳುವ ಸಂದರ್ಭದಲ್ಲೂ ಕೂಡ ನಾವು ಸ್ಕಚ್ ಮಾಡಿಸಿಕೊಳ್ಳಲಿಲ್ಲ. ರಾಮೇಗೌಡರ ಸಹೋದರಿಯಾದ ನಂಜಮ್ಮ ರವರು ವಿಭಾಗ ಕೋರಿ ಓ.ಎಸ್ 7/2007 ರಂತೆ ದಾವೆ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಓ.ಎಸ್ 7/2007 ರಲ್ಲಿ ನಂಜಮ್ಮ ರವರು ನನನ್ನು ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ 25 ನೇ ಪ್ರತಿವಾದಿ ಆಗಿದ್ದರೂ ಕೂಡ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವಾದಲ್ಲಿ ನಾನು ವಕೀಲರ ಮೂಲಕ ಹಾಜರಾಗಿದ್ದರೂ ಕೂಡ ನನ್ನ ಲಿಖಿತ ತಕರಾರು ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ, ನಾನು ಸದರಿ ದಾವಾದಲ್ಲಿ ಹಾಜರಾಗಿರಲಿಲ್ಲ, ನನಗೆ ನ್ಯಾಯಾಲಯದ ನೊಟೀಸು ಕೂಡ ಬಂದಿರಲಿಲ್ಲ. ಸದರಿ ಓ.ಎಸ್ 7/2007 ವಜಾ ಆಗಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ತೀರ್ಪಿನ ವಿರುದ್ಧ ಆರ್. ಎ 200/2020 ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ಅದರಿಂದಲೂ ಕೂಡ ನನಗೆ ನೊಟೀಸು ಬಂದಿಲ್ಲ. ನನಗೆ ಮೇಲ್ಕಂಡ ಎಲ್ಲಾ ಕೇಸುಗಳ ವಿಚಾರ ನನಗೆ ಗೊತ್ತಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದನೆ ಎಂದರೆ ಸರಿಯಲ್ಲ.

ನಿಓ.1 ರ ಕ್ರಯ ಪತ್ರದ ಜಮೀನಿನ ಉತ್ತರಕ್ಕೆ ಇರುವ ನಂಜೇಗೌಡರೆ ಈ ಅರ್ಜಿಯ ಜಡ್ಜ್ ಮೆಂಟ್ ಡೆಟರ್ ಆಗಿದ್ದಾರೆ ಎಂದರೆ ಸರಿ. ನಿಓ.2 ರಿಂದ 4 ರಂತೆ ಈ ಅರ್ಜಿ ಜಮೀನನ್ನು ಈ ಡಿಕ್ರಿ ಹೊಲ್ಡರ್ ರವರು ಜೆ.ಡ.ಆರ್ ನಂಜೇಗೌಡರಿಂದ ಖರಿದಿ ಮಾಡಿದ್ದಾರೆ ಎಂದರೆ ಅದು ನನಗೆ ಗೊತ್ತಿಲ್ಲ, ಹೆಸರು ಇದೆ ಯಾರು ಯಾರಿಗೆ ಮಾರಾಟ ಮಾಡಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ನಿಓ.2 ರ ಪಹಣಿಯಲ್ಲಿ ಇರುವ ನಂಜೇಗೌಡರ ಜಮೀನಿಗೂ ನನಗೂ ಯಾವುದೆ ಸಂಬಂಧ ಇಲ್ಲ. ನಿಓ.1 ರ ಜಮೀನಿನಲ್ಲಿ ನಾನು ಸ್ವಾಧೀನದಲ್ಲಿ ಇದ್ದೇನೆ. ನಿಓ.1 ರ ಜಮೀನಿನ ಉತ್ತರಕ್ಕೆ ಇರುವ ನಂಜೇಗೌಡರು ಸದರಿ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೊ ಇಲ್ಲವೊ ನನಗೆ ಗೊತ್ತಿಲ್ಲ. ನನಗೂ ಈ ಜಾರಿ ಅರ್ಜಿ ಜಮೀನಿಗೂ ಯಾವುದೆ ಸಂಬಂಧ ಇಲ್ಲದೆ ಇದ್ದರೂ ಕೂಡ ರಾಮೇಗೌಡರ ಮಾತು ಕೇಳಿ ಡಿಕ್ರಿ ಹೊಲ್ಡರ್ ಗೆ ತೊಂದರೆ ಕೊಡುವ ಉದ್ದೇಶದಿಂದ ತಕರಾರುದಾರನಾಗಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ

ಜಾರಿ ಅರ್ಜಿಯ ಸ್ವತ್ತಿನ ಚಕ್ಕುಬಂದಿ ಏನು ಕಾಣಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ, ನನ್ನ ಜಮೀನು ವಿಚಾರ ಮಾತ್ರ ನನಗೆ ಗೊತ್ತು.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.